Print

-1-

# Karnataka Lokayukta

(Under Section 7 of the Karnataka Lokayukta Act, 1984)

CASE NUMBER : **COMPT/LOK/BCD/3419/2018**

District : **Bangalore (U)**

**BY :**

**1. SUO MOTO,**

As per the Order of Honble Lokayukta Date: 30/11/2018

**COMPLAINANT/S**

**AGAINST :**

**1. COMMISSIONER,**
BBMP, BENGALURU.

**2. JOINT COMMISSIONER**
South Zone, BBMP, BENGALURU.

**3. SPECIAL COMMISSIONER,**
Health and Administration, BBMP, BENGALURU.

**4. DIRECTOR**
Horticlutre Department, Lalbagh, BENGALURU.

**5. DEPUTY DIRECTOR**
Horticlutre Department, Lalbagh, BENGALURU.

**6. JOINT DIRECTOR**
Department of Animal Husbandry, BENGALURU.

**RESPONDENT/S**

| | |
|---|---|
| **Allegation/Grievance Brief :** | Dereliction of Duty. |
| Received From : | Suo Moto. |
| Received On : | 30-11-2018 |

**Seal and Signature**

| | |
|---|---|
| **Complaint stands allotted to :** | **ARE-1** |

**SCRUTINY AND OPINION**

 LOK/BCD-3419/18.

## KARNATAKA LOKAYUKTA, BENGALURU

Date : 30.11.2018

## O R D E R

**"Prajavani"** Kannada daily news paper dated 24th November, 2018, has published a news item under caption **"ಲಾಲ್ ಬಾಗ್ ಉದ್ಯಾಣದಲ್ಲಿ ಕಸದ ಆರ್ಭಟ"**, highlighting that at Lalbagh, garbage and other unwanted waste materials have been thrown indiscriminately. It is useful to extract the said paper publication which reads as under -

"ಬೆಂಗಳೂರು: ಬೆಳಿಗ್ಗೆ ಗಂಟೆ 10 ಆಗುತ್ತಿದ್ದಂತೆಯೇ ಲಾಲ್‌ಬಾಗ್ ಉದ್ಯಾನದಲ್ಲಿ ಒಮ್ಮೆ ಮೌನ ಆವರಿಸುತ್ತದೆ. ನಸುಕಿನಿಂದಲೇ ಸ್ಪರ್ಧೆಗೆ ಒಡ್ಡಿದವರಂತೆ ನಡಿಗೆಯಲ್ಲಿ ತೊಡಗುವ ನಗರವಾಸಿಗಳು ಆ ವೇಳೆಗಾಗಲೇ ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ. ಆದರೆ ಅದೇ ಸಂದರ್ಭದಲ್ಲಿ ಕಸದ ಆರ್ಭಟ ಹೆಚ್ಚುತ್ತದೆ.

ಉದ್ಯಾನಕ್ಕೆ ತಮ್ಮೊಡನೆ ತಿಂಡಿ ಪೊಟ್ಟಣಗಳನ್ನು ತಂದವರು ಎಲ್ಲೆಂದರಲ್ಲಿ ಎಸೆದು ಹೋಗುತ್ತಾರೆ. ನಾಯಿಗಳಿಗೆ, ಪಕ್ಷಿಗಳಿಗೆ ತಿಂಡಿ

Lok/BCD-3419/18 -3-

ಹಾಕುತ್ತಾರೆ. ಅದರ ಜೊತೆ ತಿಂಡಿ ಮಾರುವವರೂ ಕೂಡ ಕಸವನ್ನು ಹಾಗೇ ಬಿಟ್ಟು ಹೋಗುತ್ತಾರೆ.

'ಜನರು ತಿಂಡಿಪೊಟ್ಟಣಗಳನ್ನು ಕೆಲವು ಕಡೆ ಬಿಸಾಡಿರಬಹುದು. ಆದರೆ, ಲಾಲ್‌ಬಾಗ್‌ನಲ್ಲಿ ಪ್ರತಿದಿನ ಒಂದಿಲ್ಲೊಂದು ಕಾಮಗಾರಿ ನಡೆಯುತ್ತಲೇ ಇರುತ್ತದೆ. ಮಣ್ಣಿಗಿಂತ ಹೆಚ್ಚಾಗಿ ಇದು ಕಾಂಕ್ರೀಟ್‌ಮಯ ಆಗುತ್ತಿದೆ. ಮರದಿಂದ ಬೀಳುವ ಎಲೆ, ಕಾಯಿಗಳು ಅಲ್ಲಲ್ಲೇ ಕೊಳತು ಹೋಗುತ್ತವೆ. ಸಮರ್ಪಕ ನಿರ್ವಹಣೆ ಇಲ್ಲದೇ ಉದ್ಯಾನವನ ಸೊರಗಿದಂತೆ ಕಾಣುತ್ತದೆ' ಎಂದು ಗಿರಿನಗರದ ನಿವಾಸಿ ಅರುಣಾ ಹೇಳಿದರು.

'ಬೇರೆ ಉದ್ಯಾನಗಳಂತೆ ಇಲ್ಲಿಯೂ ಕಸದ ಸಮಸ್ಯೆ ಇದೆ. ಆದರೆ, ಕೆಲಸಗಾರರು ತುಂಬಾ ಕಡಿಮೆ ಇದ್ದಾರೆ. ಅವರು ಎಷ್ಟು ಅಂತ ಕಸದ ವಿಲೇವಾರಿ ಮಾಡುತ್ತಾರೆ? ಇಷ್ಟು ದೊಡ್ಡ ಉದ್ಯಾನಕ್ಕೆ ಕೆಲವೇ ಮಂದಿ ಕೆಲಸಗಾರರು ಇದ್ದರೆ ಹೇಗೆ ಸಾಧ್ಯ' ಎಂದು ಅಲ್ಲಿಯ ಹಾಪ್‌ಕಾಮ್ಸ್ ಮಳಿಗೆಯ ಸಹಾಯಕರೊಬ್ಬರು ಕೇಳಿದರು. ಕಸದ ಸಮಸ್ಯೆ ಜೊತೆಗೆ ಇಲ್ಲಿ ವಿಲೇವಾರಿಯೂ ದೊಡ್ಡ ಪ್ರಶ್ನೆಯಾಗಿದೆ. ಕಸವನ್ನು ಅಲ್ಲಿಯೇ ಕೂಡಿಸಿ ಬೆಂಕಿ ಹಾಕುತ್ತಾರೆ. ಇದರಿಂದ ವಾಯುವಿಹಾರಿಗಳು ಕೂಡ ತೊಂದರೆ ಅನುಭವಿಸುತ್ತಿದ್ದಾರೆ.

'ಎಲ್ಲಾ ಉದ್ಯಾನಗಳಂತೆ ಇಲ್ಲಿಯೂ ಮಕ್ಕಳಿಗೆ ಆಟ ಆಡೋಕೆ ಜಾಗ ಇರಬೇಕಿತ್ತು' ಎಂದು ಕೆಲವು ಪೋಷಕರು ಅಭಿಪ್ರಾಯಪಟ್ಟರು.

ಕಾಣೆಯಾದ ಮ್ಯೂಸಿಯಂ: ಲಾಲ್‌ಬಾಗ್ ಒಳಗೆ ಮ್ಯೂಸಿಯಂ ಇರುವುದಾಗಿ ಗೂಗಲ್ ಮ್ಯಾಪ್‌ನಲ್ಲಿ ತೋರಿಸುತ್ತದೆ. ಇದನ್ನು ನೋಡಿಕೊಂಡು ವಿದೇಶಿಯರು ಸೇರಿದಂತೆ ಸಾಕಷ್ಟು ಜನರು ಇಲ್ಲಿಗೆ ಬರುತ್ತಾರೆ. ಆದರೆ ಅಲ್ಲಿ ಯಾವುದೇ ಮ್ಯೂಸಿಯಂ ಇಲ್ಲ. ಮೊದಲು ಇತ್ತು. ಆದರೆ ಈಗ ಅಲ್ಲಿ ಏನೂ ಇಲ್ಲ."

2) The news item published above highlights that the beautiful Lalbagh garden which has been maintained and required to be preserved for the benefit of the general public and more particularly for the senior citizens and children is being polluted on account of indiscriminate throwing of garbage containing eatables and other waste materials. This is taking place on account of the total failure of the officers concerned to maintain the Lalbagh Garden.

3) Prima-facie, if the news item published in the news paper is correct, it only indicates that there has been total dereliction of duty by the concerned officers who are required to maintain good atmosphere and cleanliness. The said inaction on the part of the concerned officers amounts to mal-administration within the meaning of Section 2(10) of the Karnataka Lokayukta

Lok/BCD - 3419/18 -5-

Act. The grievances of the public are also required to be addressed as contemplated under Section 2(8) of the Karnataka Lokayukta Act.

4) It is needless to point out that throwing of indiscriminate garbage and other unwanted materials will emanate bad smell which will affect the health of the public who visit for morning walk and for other purposes. It is the duty of the concerned officers to prevent any member of the public from indiscriminate throwing of garbage and other waste materials and to take appropriate legal action against such culprits. It is also the duty of the authorities concerned to maintain the garden in the way it is required to be maintained for public purpose/good.

5) It has also come to my notice that there are stray dogs in the Lalbagh garden. While the life and safety of the dogs will have to be taken care by the concerned authorities under "Prevention of Cruelty to Animals Act, it is also the duty of the authorities concerned to prevent any untoward incident to the members of the public who visit the Lalbagh or any other public place from attack by the dogs and causing physical injury to the

people who use Lalbagh and other public places. In this aspect of the matter, the BBMP has a huge responsibility. It is useful to extract relevant portion of Section 58, 258 and 345 of the Karnataka Municipal Corporations Act, 1976 which reads as follows –

> "**Sec.58. Obligatory functions of the corporations**.- It shall be incumbent on the corporation to make reasonable and adequate provision by any means or measures which it is lawfully competent to use or to take, for each of the following matters, namely:- (1) erection of substantial boundary marks of such description and in such positions as shall be approved by the Government defining the limits or any alteration in the limits of the city; **(2) the watering and cleansing of all public streets and public places in the city and the removal of all sweepings there from; (3) the collection, removal, treatment and disposal of sewage, offensive matter and rubbish and, the preparation of compost manure from such sewage, offensive matter and rubbish;"**

> "**Sec. 258. Provision for daily cleaning of streets and removal of rubbish and filth**.- The Commissioner shall provide,- (a) for the daily surface-cleaning of all public streets and the removal of the sweeping therefrom, and (b) for the removal of,- (i) the contents of all receptacles and depots and the accumulations at all places provided or appointed by him under section 255 for the temporary

Lok|BCD-3419|18 -7-

deposit of any of the things specified therein, and (ii) all things 1 [collected or] 1 deposited by owners or occupiers of premises in pursuance of any notice issued under section 256."

"**345. Destruction of stray pigs and dogs.-** If any dogs 1 [x x x]1 or pigs are found straying, the same may be summarily destroyed by any person authorised in that behalf in writing by the Commissioner."

6) In view of the above, I am of the considered view that it is in public interest to treat the above news item published in Prajavani daily news paper dated 24.11.2018, as source material to initiate suo-motu proceedings in exercise of power conferred on me under Sec.7(1)(b) and Sec.9(3)(a) of Karnataka Lokayukta Act – 1984, for the purpose of enquiry and investigation. Accordingly, the suo-motu proceedings is initiated. The office is directed to register this case as suo-motu proceedings.

7) For the purpose of inquiry/investigation as directed above, it is necessary to issue notices to the officers mentioned below and implead them as respondents No.1 to 6.

1. The Commissioner, Bruhat Bengaluru Mahanagara Palike, Bengaluru.

- 8 · Lok/BCD-3419/18.

2. The Joint Commissioner, South Zone, Bruhat Bengaluru Mahanagara Palike, Bengaluru.

3. The Special Commissioner, (Health & Administration), BBMP, Bengaluru.

4. The Director, Horticulture Department, Lalbagh, Bengaluru

5. The Deputy Director, Horticulture Department, Lalbagh, Bengaluru

6. The Joint Director, Department of Animal Husbandry, Bengaluru

8) As observed by me earlier, it is the duty of all the authorities concerned and the officers referred to above, to take immediate remedial measures to redress the grievances of the public which are highlighted in the news item extracted above. Further, the respondents referred to above are directed to submit their comments/reply and also the steps they have taken to prevent throwing of garbage and other waste materials at Lalbagh and to prevent members of the public being attacked by the stray dogs. The comments called for may be submitted within four weeks time from today.

Lok/BCD-3419/18 8-9-

9) List this case for consideration of report on **27th Dec, 2018 at 3.00 p.m.** Communicate this order to all the parties concerned including the Staff Reporter of "Prajavani" Kannada daily news paper dated 24th Nov. 2018. The reporter is reserved liberty to come and assist the Lokayukta if he finds desirable to do so and submit further information.

along with the copy of the paper publication

(Justice P.Vishwanatha Shetty) 30/11/2018
Lokayukta
State of Karnataka

*vl

10) ARLO-IV / Additional Registrar of Enq.1

11) 27/12/2018. ARE-1.

ಗೌ. ಲೋಕಾಯುಕ್ತ -ರವರ ಆದೇಶದಂತೆ ಸಂಬಂಧಪಟ್ಟ ಅಧಿಕಾರಿ -ಗಳಿಗೆ ನೋಟೀಸ್ ಜಾರಿ ಮಾಡಿದ್ದು, ಸ್ವೀಕೃತಿ ಮಂಡಿಸಿದೆ.
ಆಯುಕ್ತರು, ತುಮಕೂರು & ತಹಶೀಲ್ದಾರ್, ಕೋಲಾರ ಜಿಲ್ಲೆ -ರವರ ಪತ್ರದ ದಿ: 15/12/18 ಬಂದಿರುತ್ತದೆ.

ವಿಶೇಷ ಆಯುಕ್ತರು. (ಆರೋಗ್ಯ & ಆಡಳಿತ) ಬಿ.ಬಿ.ಎಂ.ಪಿ. -ರವರ ಪತ್ರದ ದಿ: 22/12/18 ಬಂದಿರುತ್ತದೆ.

LOK/BCD-3419/2018.

ತೋಟಗಾರಿಕಾ
ನಿರ್ದೇಶಕರುರವರ
ಪತ್ರದ ದಿ: 26/12/2018
ಬಂದಿದ್ದು, ಮಾನ್ಯರ
ಮುಂದಿನ ಆದೇಶಕ್ಕಾಗಿ
ಮಂಡಿಸಿದೆ.

# KARNATAKA LOKAYUKTA, BENGALURU

No.Compt/LOK/BCD/3419/2018/ARE-1 Date :27.12.2018

## O R D E R

Dr.M.Jagadeesh, Joint Director of Horticulture is present along with Sri M.R.Chandrashekar, Deputy Director, Lalbagh, Bengaluru, on behalf of Respondent No.4 and 5. A Status Report dated 22/26.12.2018 has been filed by the Director of Horticulture Department. Along with the Status Report certain photographs depicting developmental activities taken by the Horticulture Department has been enclosed. It is useful to extract the report filed by the Director of Horticulture Department, which reads as hereunder –

"ಲಾಲ್‌ಬಾಗ್ ಉದ್ಯಾನವನದಲ್ಲಿ "ಕಸದ ಆರ್ಭಟ" ಎಂಬ ವಿಷಯದ ಬಗ್ಗೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಲೇಖನಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದನ್ವಯ ತಮ್ಮ ವತಿಯಿಂದ ನೋಟಿಸ್‌ನ್ನು ನೀಡಿದ್ದು, ತಮ್ಮಗಳ ಸೂಚನೆಯಂತೆ ಸಂಬಂಧಿಸಿದ ವಿವರವಾದ ವರದಿಯನ್ನು ಈ ಈ ಕೆಳಕಂಡಂತೆ ತಮ್ಮಗಳ ಆಧ್ಯ ಅವಗಾಹನೆಗೆ ಸಲ್ಲಿಸಿದೆ.

**I.** <u>ಲಾಲ್‌ಬಾಗ್ ಉದ್ಯಾನವನದಲ್ಲಿ ಕಸದ ಆರ್ಭಟದ ಕುರಿತು ಪ್ರಜಾವಾಣಿ ದಿನಪತ್ರಿಕೆಯಲ್ಲಿ</u>

Lok/BCD - 3419/18 - 12 -

## ಪ್ರಕಟವಾದ ಪ್ರಕಟಣೆಗೆ ಸಂಬಂಧಿಸಿದ ವಿವರಣಾ ವರದಿ:

### 1. ಸಸ್ಯತೋಟದ ಕಸದ ಸಮಸ್ಯೆ:-

1856 ರಲ್ಲಿ ಸಸ್ಯಶಾಸ್ತ್ರೀಯ ಸ್ಥಾನಮಾನ ಪಡೆದ ಲಾಲ್‌ಬಾಗ್‌ನ ಒಟ್ಟು ವಿಸ್ತೀರ್ಣ 240 ಎಕರೆಗಳು. ಇದರಲ್ಲಿ 30 ಎಕರೆ ಕೆರೆ ಪ್ರದೇಶ ಹಾಗೂ 15 ಎಕರೆ ಬಂಡೆ ಪದ್ರೇಶವನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಕಡೆ ಅಮೂಲ್ಯ ಸಸ್ಯ ಸಂಗ್ರಹ ಇರುತ್ತದೆ. ಸಾವಿರಾರು ವಾಯು ವಿಹಾರಿಗಳು ದಿನವಹಿ ಲಾಲ್‌ಬಾಗ್‌ಗೆ ಬಂದು ಹೋಗುವುದರ ಜೊತೆಗೆ ಸಾಮಾನ್ಯ ದಿನಗಳಲ್ಲಿ ಪ್ರತಿದಿನ ಅಂದಾಜು 5 ರಿಂದ 6 ಸಾವಿರ ಜನ, ರಜಾ ದಿವಸಗಳಲ್ಲಿ 12 ಸಾವಿರದಿಂದ 15 ಸಾವಿರ ವಿಶೇಷ ಸಂದರ್ಭಗಳಲ್ಲಿ ಹಾಗೂ ಫಲಪುಷ್ಪ ಪ್ರದರ್ಶನದ ಸಂದರ್ಭಗಳಲ್ಲಿ 50 ಸಾವಿರದಿಂದ 1 ಲಕ್ಷದ ವರೆಗೆ ಪ್ರವಾಸಿಗರು ಹಾಗೂ ಸಾರ್ವಜನಿಕರು ಲಾಲ್‌ಬಾಗ್‌ನ್ನು ಸಂದರ್ಶಿಸಿರುತ್ತಾರೆ.

ಇಷ್ಟು ಪ್ರಮಾಣದಲ್ಲಿ ನಡಿಗೆದಾರರು, ಪ್ರವಾಸಿಗರು ಮತ್ತು ಸಾರ್ವಜನಿಕರು ಲಾಲ್‌ಬಾಗ್‌ನ್ನು ದಿನವಹಿ ಸಂದರ್ಶಿಸುತ್ತಿರುವ ಹಿನ್ನಲೆಯಲ್ಲಿ ಲಾಲ್‌ಬಾಗ್ ಸಸ್ಯತೋಟವನ್ನು ಕಸ/ತ್ಯಾಜ್ಯ, ಪ್ಲಾಸ್ಟಿಕ್ ಮುಕ್ತವನ್ನಾಗಿಸಲು ಹಾಗೂ ನೈರ್ಮಲ್ಯತೆಯಿಂದ ಕೂಡಿದ ಪರಿಸರ ಸ್ನೇಹಿ ಸಸ್ಯತೋಟವನ್ನಾಗಿಸಲು ತೋಟಗಾರಿಕೆ ಇಲಾಖೆಯು ಕೆಳಕಂಡ ಗುರುತರ ಕ್ರಮಗಳನ್ನು ಕೈಗೊಂಡಿರುತ್ತದೆ.

1. ಲಾಲ್‌ಬಾಗ್ ಸಸ್ಯತೋಟದಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುವುದು, ತಿಂಡಿ ತಿನಿಸುಗಳನ್ನು ಒಳ ತರುವುದು ಹಾಗೂ ಪ್ರಾಣಿ ಪಕ್ಷಿಗಳಿಗೆ ಆಹಾರ ಹಾಕುವುದನ್ನು ನಿಷೇದಿಸಲಾಗಿದೆ.

2. ಸಸ್ಯತೋಟದ ವ್ಯಾಪ್ತಿಯಲ್ಲಿ 156 ಸಂಖ್ಯೆಯ ಡಸ್ಟ್‌ಬಿನ್‌ಗಳಿಂದ್ದು, ಪ್ರಸ್ತುತ ಹೆಚ್ಚುವರಿಯಾಗಿ ಹಸಿಕಸ ಮತ್ತು ಒಣಕಸಗಳ ವರ್ಗೀಕರಣಕ್ಕಾಗಿ ಪ್ರತ್ಯೇಕವಾಗಿ 250 ಸಂಖ್ಯೆಯ ಡಸ್ಟ್‌ಬಿನ್‌ಗಳನ್ನು ಅಳವಡಿಸಲಾಗಿದೆ.

3. ಸಸ್ಯತೋಟದ ಒಳಾಂಗಣದ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ಹಾಗೂ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಅಧಿಕಾರಿ /ಸಿಬ್ಬಂದಿಗಳು ತಮ್ಮ ಕಛೇರಿಗಳಲ್ಲಿಯೂ ಸಹಾ ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

4. ಲಾಲ್‌ಬಾಗ್‌ನ 4 ಪ್ರವೇಶ ದ್ವಾರಗಳಲ್ಲಿ ಪ್ರತ್ಯೇಕವಾಗಿ ಮಹಿಳಾ ಮೇಲ್ವಿಚಾರಕಿ / ಭದ್ರತಾ ಸಿಬ್ಬಂದಿಗಳನ್ನು ಬೆಳಿಗ್ಗೆ 6 ರಿಂದ ಸಂಜೆ 6

-13- Lok/BCD-3419/18

ಗಂಟೆವರೆಗೆ ನಿಯೋಜಿಸಿದ್ದು, ಯಾರು ಸಹಾ ಪ್ಲಾಸ್ಟಿಕ್ ನೀರಿನ ಬಾಟಲ್ ಹಾಗೂ ಆಹಾರದ ಪೊಟ್ಟಣಗಳನ್ನು ಒಳ ತರುವುದನ್ನು ತಪಾಸಣೆಗೊಳಿಸಿ ಕಠಿಣವಾಗಿ ನಿರ್ಭಂದಿಸಲಾಗಿರುತ್ತದೆ.

5. ಸಸ್ಯತೋಟದ ವ್ಯಾಪ್ತಿಯಲ್ಲಿ ಸುಚಿತ್ವ ಮತ್ತು ನೈರ್ಮಲ್ಯತೆಯನ್ನು ಕಾಪಾಡಲು ಅನುವಾಗುವಂತೆ 2 ಪಾಳಿಯಲ್ಲಿ 40 ಜನ ಸ್ವಚ್ಚತಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ.

ಎಲ್ಲಾ ಒಳ ರಸ್ತೆಗಳು ಹಾಗೂ ಪ್ರಮುಖ ಪ್ರದೇಶಗಳಲ್ಲಿ ಅಪ್ಪಿತಪ್ಪಿ ಬೀಳುವ ಸಣ್ಣ ಪ್ರಮಾಣದ ಕಸವನ್ನು ಆಗಿಂದಾಗ್ಗ್ಯೇ, ಕಾಲಕಾಲಕ್ಕೆ ತೆರವುಗೊಳಿಸುವ ಕಾರ್ಯ ಕೈಗೊಳ್ಳಲು ಅನುವಾಗುವಂತೆ 3 ಸಂಖ್ಯೆಯ ವಿಶೇಷ ಸ್ವಚ್ಚತಾ ಸಿಬ್ಬಂದಿಗಳ ತಂಡವನ್ನು ನಿಯೋಜಿಸಲಾಗಿರುತ್ತದೆ. ( ರ್‍ಯಾಕ್‌ಫಿಕ್ಕರ್ಸ್)

6. ಲಾಲ್‌ಬಾಗ್ ಕೆರೆಯ ಸ್ವಚ್ಚತೆ ಮತ್ತು ನೈರ್ಮಲ್ಯತೆಯನ್ನು ಕಾಲ ಕಾಲಕ್ಕೆ ನಿರ್ವಹಿಸಲು ಅನುವಾಗುವಂತೆ ಮೂರು ಜನರ ವಿಶೇಷ ತಂಡವನ್ನು ನಿಯೋಜಿಸಲಾಗಿರುತ್ತದೆ.

7. ಹಿಂದಿನ ವರ್ಷಗಳಲ್ಲಿ ಸಸ್ಯತೋಟದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು 4–5 ಸ್ಥಳಗಳಲ್ಲಿ ಶೇಖರಿಸಿ ವಾರಕ್ಕೊಮ್ಮೆ ಹೊರಗೆ ಕಳುಹಿಸುವ ಪದ್ದತಿ ಇತ್ತು. ಆದರೆ ಜನವರಿ–2018 ರಿಂದ ಸಸ್ಯತೋಟವನ್ನು ಎರಡು ಸಮಭಾಗವಾಗಿಸಿ ಎರಡು ವಿಭಾಗಳಿಗೂ ತಲಾ ಒಂದೊಂದು ಮಿನಿ ಟಿಪ್ಪರ್‌ಗಳನ್ನು ನೀಡಲಾಗಿದೆ. ಈ ಮೂಲಕ ಸಂಗ್ರಹವಾಗುವ ತ್ಯಾಜ್ಯವನ್ನು ಆ ಕ್ಷಣವೇ ಸಸ್ಯತೋಟದ ಯಾವುದೇ ಸ್ಥಳಗಳಲ್ಲಿ ಹಾಕದೇ ಕಾಂಪ್ಯಾಕ್ಟರ್‌ಗೆ ಹಾಕಲಾಗುವುದು ಮತ್ತು ಎರಡು ದಿನಗಳಿಗೊಮ್ಮೆ ಕಾಂಪ್ಯಾಕ್ಟರ್ ತ್ಯಾಜ್ಯವನ್ನು ನಿರಂತರವಾಗಿ ಹೊರಸಾಗಿಸಲಾಗುತ್ತಿದೆ.

8. ಡಸ್ಟಬಿನ್‌ಗಳಲ್ಲಿ ಸಂಗ್ರಹವಾಗುವ ಹಸಿ ಕಸ ಮತ್ತು ಒಣ ಕಸವನ್ನು ಆಯಾ ದಿನವೇ ಸಂಗ್ರಹಿಸಿ ಸಿದ್ದಾಪುರ ಗೇಟ್ ಬಳಿ ಇರುವ ಸಾರ್ಟಿಂಗ್ ಸ್ಟೇಷನ್‌ನಲ್ಲಿ ಬೇರ್ಪಡಿಸಲಾಗುವ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಸಮರ್ಥನಾ ಸಂಸ್ಥೆಗೆ ಮರು ಬಳಕೆ ಮಾಡಲು ನೀಡಲಾಗುತ್ತಿದೆ.

Lok/BCD-3419/18 -14-

9. ಡಸ್ಟ್‌ಬಿನ್‌ಗಳಲ್ಲಿನ ಸಮರ್ಪಕ ಕಸ ನಿರ್ವಹಣೆಗಾಗಿ ಬಾಷ್ ಕಂಪನಿಯು ಸಿ.ಎಸ್.ಆರ್ ಅಡಿಯಲ್ಲಿ ಮೂರು ಪರಿಣಿತ ಸಹಾಯಕರನ್ನು ಸಹಾ ನೀಡಿರುತ್ತದೆ.

10. ಸಸ್ಯತೋಟದಲ್ಲಿ ಸಿಗುವ ತ್ಯಾಜ್ಯವನ್ನು ಕಾಂಪೋಸ್ಟ್ ಉತ್ಪಾದನೆಗಾಗಿ ಬಳಸಲಾಗುತ್ತದೆ. ಪ್ರಸ್ತುತ ಜಿಂಕೆ ನರ್ಸರಿಯಲ್ಲಿ 30 ಟನ್‌ಗಳನ್ನು ಕಾಂಪೋಸ್ಟ್‌ನ್ನು ತಯಾರಿಸಲಾಗಿದೆ. ಜೊತೆಗೆ 10 ಪ್ರದೇಶಗಳಲ್ಲಿ ಲೀಫ್ ಕಾಂಪೋಸ್ಟ್‌ಗಳ ಮುಖೇನವು ಸಹಾ ಕಾಂಪೋಸ್ಟ್‌ನ್ನು ತಯಾರಿಸಿ ಬಳಸಲಾಗುತ್ತಿದೆ.

11. ಲಾಲ್‌ಬಾಗ್‌ನಲ್ಲಿ ದೇಶ ವಿದೇಶದ 2250 ಕ್ಕೂ ಹೆಚ್ಚು ಸಸ್ಯ ಪ್ರಭೇದಗಳಿದ್ದು, ಸ್ವಾಭಾವಿಕವಾಗಿ ವಸಂತ ಕಾಲಕ್ಕೆ ಮುನ್ನ ಹಾಗೂ ಕೆಲವು ವೃಕ್ಷಗಳಲ್ಲಿ ಬೇರೆ ಬೇರೆ ಅವಧಿಯಲ್ಲಿ ಹೂವು, ಎಲೆ ಮತ್ತು ಹಣ್ಣುಗಳು ಉದುರುವುದು ಸಾಮಾನ್ಯವಾಗಿರುತ್ತದೆ. ಕೆಲವು ಆಯ್ದ ಪ್ರದೇಶಗಳಲ್ಲಿ ಇವುಗಳನ್ನು ಸ್ವಾಭಾವಿಕ ಸಾವಯವ ಹೊದಿಕೆಯಾಗಿ ಬಳಸಿ, ಮುಂದೆ ನೈಸರ್ಗಿಕವಾಗಿ ಗೊಬ್ಬರವಾಗಲು ಬಿಡಲಾಗುತ್ತಿದೆ. ಕೆಲವರು ಇದನ್ನು ಕಸವೆಂದು, ತೆರವುಗೊಳಿಸುತ್ತಿಲ್ಲವೆಂದು ದೂರುವುದುಂಟು ಆದರೆ ವೈಜ್ಞಾನಿಕವಾಗಿ ಇದನ್ನು ಒಪ್ಪಲಾಗದು.

12. ಮೇಲ್ಕಂಡಂತೆ ಸ್ವಚ್ಚತೆಗೆ ಸಂಬಂಧಿಸಿದಂತೆ ಸಸ್ಯತೋಟದಲ್ಲಿ ಕೈಗೊಳ್ಳಲಾಗುತ್ತಿರುವ ಪರಿಣಾಮಕಾರಿ ಕ್ರಮಗಳಿಂದ ಹಿಂದಿನ ಸಾಲುಗಳಿಗೆ ಹೋಲಿಸಿದರೆ ಪ್ರಸ್ತುತ ಶೇಕಡ 95-96 ರಷ್ಟು ಪ್ರಮಾಣದ ಸ್ವಚ್ಚತೆ ಇರುತ್ತದೆ. ಹಿಂದೆ ಪ್ರತಿ ಮಾಹೆಗೆ 2.5 ಟನ್‌ಗೂ ಅಧಿಕ ಒಣಕಸ ಸಂಗ್ರಹಗೊಳ್ಳುತ್ತಿದ್ದು, ಪ್ರಸ್ತುತ ಇದು 300-400 ಕಿಲೋ ಗ್ರಾಂಗೆ ಇಳಿದಿರುವುದು ಕಂಡು ಬಂದಿರುತ್ತದೆ.

ಮೇಲಿನ ಎಲ್ಲಾ ಪರಿಣಾಮಕಾರಿ ಕ್ರಮಗಳಿಂದಾಗಿ ಲಾಲ್‌ಬಾಗ್ ಪರಿಸರದಲ್ಲಿ ಯಾವುದೇ ತ್ಯಾಜ್ಯವಿಲ್ಲದೆ, ಅತ್ಯಂತ ಸುಂದರ ಹಾಗೂ ಪರಿಸರ ಸ್ನೇಹಿ ವಾತಾವರಣ ಉಂಟಾಗಿದ್ದು, ಕೆರೆಯ ಪರಿಸರ ಕೂಡ ಅತ್ಯಂತ ನೈರ್ಮಲತೆಯಿಂದ ಕೂಡಿರುತ್ತದೆ ಹಾಗಾಗಿ ಸಸ್ಯೋಟಕ್ಕೆ ಭೇಟಿ ನೀಡುವ ದೇಶ-ವಿದೇಶಿ ಪ್ರವಾಸಿಗರೂ ನಡಿಗೆದಾರರು ಸಂತಸಗೊಂಡು, ಪ್ರಸಂಶೆಯನ್ನು ಸಹಾ ವ್ಯಕ್ತಪಡಿಸಿರುತ್ತಾರೆ. ಕಸದ ಸಮಸ್ಯೆಯ ಬಗ್ಗೆ ದಿನ ಪತ್ರಿಕೆಯಲ್ಲಿ ಪ್ರಕಟಿಸಿರುವ ಮಾಹಿತಿಗೆ ಯಾವುದೇ ಹುರುಳಿರುವುದಿಲ್ಲವೆಂಬ ಅಂಶವನ್ನು ತಮ್ಮ ಅವಗಾಹನೆಗೆ ಮಂಡಿಸಿದೆ.

-15- Lok/BCD-3419/18.

## II. ಬೀದಿ ನಾಯಿಗಳ ನಿಯಂತ್ರಣ:-

ಲಾಲ್‌ಬಾಗ್ ಸಸ್ಯತೋಟದ ವ್ಯಾಪ್ತಿಯಲ್ಲಿರುವ ಬೀದಿ ನಾಯಿಗಳ ನಿಯಂತ್ರಣ ಕಾರ್ಯವು ಮೂಲತಃ ಪಶು ಸಂಗೋಪನಾ ಇಲಾಖಾ ವ್ಯಾಪ್ತಿಗೆ ಬರುವುದರಿಂದ, ಈ ವ್ಯಾಪ್ತಿಗೆ ಬರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶು ಸಂಗೋಪನಾ ವಿಭಾಗದ ಜಂಟಿ ನಿರ್ದೇಶಕರು, ಹಾಗೂ ಸಹಾಯಕ ನಿರ್ದೇಶಕರುಗಳು ಬೀದಿ ನಾಯಿಗಳ ವಿಷಯದ ಬಗ್ಗೆ ಕಾರ್ಯೋನ್ಮುಖರಾಗಿದ್ದು, ತೋಟಗಾರಿಕೆ ಇಲಾಖಾ ವತಿಯಿಂದ ಕಾಲ-ಕಾಲಕ್ಕೆ ಅವರು ಕೈಗೊಳ್ಳುವ ಕಾರ್ಯಗಳ ಜೊತೆಗೆ ಅವರ ಸಲಹೆ ಹಾಗೂ ಮಾರ್ಗದರ್ಶನವನ್ನು ಪಡೆಯಲಾಗುತ್ತಿದೆ.

ಲಾಲ್‌ಬಾಗ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪಶುಸಂಗೋಪನಾ ಇಲಾಖಾ ಅಧಿಕಾರಿಗಳು ಕೈಗೊಂಡಿರುವ ಕಾರ್ಯಗಳು ಹಾಗೂ ನೀಡಿರುವ ಸಲಹೆ- ಸೂಚನೆ/ನಿರ್ಭಂದಗಳು ಈ ಕೆಳಕಂಡಂತಿವೆ.

1. ಲಾಲ್‌ಬಾಗ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಇರುವಿಕೆಗೆ ಪ್ರತಿದಿನ ಬಂದು ಹೋಗುವ ವಾಯುವಿಹಾರಿಗಳು ಹಾಕುವ ಆಹಾರವು ಮುಖ್ಯ ಕಾರಣವಾಗಿರುತ್ತದೆ. ಎಂದು ಅಭಿಪ್ರಾಯಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸಾಕಷ್ಟು ಕಡೆ ಪ್ರಾಣಿ-ಪಕ್ಷಿಗಳಿಗೆ ಆಹಾರ ಹಾಕುವುದನ್ನು ನಿಷೇಧಿಸಲಾಗಿದೆ ಎಂಬ ಮಾಹಿತಿ ಫಲಕಗಳನ್ನು ಅಳವಡಿಸಲಾಗಿದೆ. ಲಾಲ್‌ಬಾಗ್ ಸಸ್ಯತೋಟಕ್ಕೆ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಅಂದಾಜು 6000 ರಿಂದ 8000 ಸಾವಿರ ಜನ ನಡಿಗೆದಾರರು ವಾಯಿವಿಹಾರಕ್ಕೆ ಬರುತ್ತಾರೆ. ರಜಾ ದಿನಗಳಲ್ಲಿ 10 ರಿಂದ 12 ಸಾವಿರ ವಾಯುವಿಹಾರಿಗಳು ಆಗಮನಿಸುತ್ತಿದ್ದು, ಸಸ್ಯತೋಟದ ಒಳಗೆ ತಿಂಡಿ ತಿನಿಸುಗಳನ್ನು ತರುವುದು ಮತ್ತು ಪ್ರಾಣಿ ಪಕ್ಷಿಗಳಿಗೆ ತಿಂಡಿ ತಿನಿಸುಗಳನ್ನು ಹಾಕುವುದನ್ನು ನಿಷೇಧಿಸಲಾಗಿದೆ. ದಿನವಹಿ ಕಾರ್ಯನಿರ್ವಹಿಸುವ ಭದ್ರತಾ ಸಿಬ್ಬಂದಿಗಳು ಈ ಬಗ್ಗೆ ಮಾಹಿತಿ ಮತ್ತು ಎಚ್ಚರಿಕೆ ನೀಡುತ್ತಿದ್ದರೂ ಸಹಾ ಕಣ್‌ತಪ್ಪಿಸಿ ನಿಷೇದವಿದ್ದರೂ ಸಹಾ ಆಹಾರ ಹಾಕುವುದನ್ನು ವಾಯುವಿಹಾರಿಗಳು ಮುಂದುವರಿಸಿರುತ್ತಾರೆ.

ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿರುವ ತೋಟಗಾರಿಕೆ ಇಲಾಖೆಯು ಅಕ್ಟೋಬರ್-2018 ರ ಮಾಹೆಯಿಂದ ಲಾಲ್‌ಬಾಗ್‌ನ 4 ಪ್ರವೇಶ ದ್ವಾರಗಳಿಗೂ ತಲಾ ಒಬ್ಬರು ಮಹಿಳಾ ಭದ್ರತಾ ಸಿಬ್ಬಂದಿ ಹಾಗೂ ಒಬ್ಬರು ಭದ್ರತಾ ಸೂಪರ್‌ವೈಸರ್‌ಗಳನ್ನು ಪ್ರತ್ಯೇಕವಾಗಿ ನಿಯೋಜಿಸಿ ಬೆಳಗಿನ ಜಾವ 6 ಗಂಟೆಯಿಂದ ಸಂಜೆ 6 ರವರೆಗೆ ಲಾಲ್‌ಬಾಗ್‌ನ್ನು ಸಂದರ್ಶಿಸುವ ಯಾವುದೇ ವಾಯು ವಿಹಾರಿಗಳು, ಪ್ರವಾಸಿಗರು ಮತ್ತು

Lok/BCD-3419/18 -16-

ಸಾರ್ವಜನಿಕರನ್ನು ಪ್ರವೇಶ ದ್ವಾರಗಳಲ್ಲಿ ತಪಾಸಣೆಗೊಳಿಸಿ ಕಡ್ಡಾಯವಾಗಿ ಲಾಲ್‌ಬಾಗ್ ಒಳಗೆ ತಿಂಡಿ ತಿನಿಸುಗಳನ್ನು ತರುವುದನ್ನು ನಿಯಂತ್ರಿಸಲಾಗಿದೆ ಇದರಿಂದ ಶೇ 90% ರಷ್ಟು ಭಾಗ ತಿಂಡಿ ತಿನಿಸುಗಳನ್ನು ಒಳ ತರುವುದು ಕಡಿಮೆಯಾಗಿದೆ. ಹೀಗಿದ್ದರೂ ಸಹಾ ಕೆಲವು ವಾಯು ವಿಹಾರಿಗಳು ತಮ್ಮ ಜೇಬು ಇಲ್ಲವೆ ಕಾಲು ಚೀಲಗಳಲ್ಲಿ ತಿಂಡಿ ತಿನಿಸುಗಳನ್ನು ಒಳತರುವುದನ್ನು ನಿಲ್ಲಿಸಿರುವುದಿಲ್ಲ.

2. ಯಾವುದೇ ನಾಯಿಗಳನ್ನು ಕೊಲ್ಲಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲವೆಂದು ಹಾಗೂ ಯಾವುದೇ ನಾಯಿಗಳನ್ನು ಲಾಲ್‌ಬಾಗ್‌ನಿಂದ ಬೇರೆಡೆಗೆ ಸ್ಥಳಾಂತ್ತರಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ.

3. ತುಂಬಾ ರೋಗಗ್ರಸ್ತ ನಾಯಿಗಳನ್ನು ಮಾತ್ರ ಗುರುತಿಸಿ ಅವುಗಳಿಗೆ ಚಿಕಿತ್ಸೆ ನೀಡಿ ಗುಣಮುಖವಾದ ನಾಯಿಗಳು ಮಾತ್ರ ವಾಪಸ್ ಇಲ್ಲಿಯೇ ಬಿಡಲು ಅವಕಾಶವಿರುತ್ತದೆ.

4. ಸಸ್ಯತೋಟದಲ್ಲಿರುವ ಹೆಣ್ಣು ನಾಯಿಗಳನ್ನು ಗುರುತಿಸಿ ನಾಯಿಗಳು ವೃದ್ಧಿಯಾಗದಂತೆ ತಡೆಯಲು ಗುರುತಿಸಿದ ನಾಯಿಗಳನ್ನು ತೆಗೆದುಕೊಂಡು ಹೋಗಿ ಸಂತಾನಹರಣ ಚಿಕಿತ್ಸೆ ಮಾಡಿ ತದನಂತರ ಸಸ್ಯತೋಟಕ್ಕೆ ವಾಪಸ್ ಬಿಡಲಾಗುತ್ತಿದೆ. ಈ ಪ್ರಕ್ರಿಯೆ ನಿರಂತರವಾಗಿ ಮುಂದುವರೆದಿದೆ.

5. ಲಾಲ್‌ಬಾಗ್‌ನಲ್ಲಿ ಏರ್ಪಡಿಸುವ ಫಲಪುಷ್ಪ ಪ್ರದರ್ಶನದ ಸಂದರ್ಭಗಳು ಹಾಗೂ ಇತರೆ ವಿಶೇಷ ಸಂದರ್ಭಗಳಲ್ಲಿ ಅಗ್ರೆಸೀವ್ ಇರುವ ನಾಯಿಗಳನ್ನು ಗುರುತಿಸಿ ಅವುಗಳಿಗೆ ಮುಂಜಾಗ್ರತೆಯಾಗಿ ಆಂಟಿ ಅಗ್ರೆಸೀವ್ ಮಾತ್ರೆಯನ್ನು ನೀಡುತ್ತಿದ್ದಾರೆ. ಹಾಗೂ ಈ ಸಂದರ್ಭದಲ್ಲಿ ಎಲ್ಲಾ ನಾಯಿಗಳಿಗೂ ಆಂಟಿರೇಬಿಸ್ ಇಂಜೆಕ್ಷನ್ ಅನ್ನು ಸಹಾ ನೀಡುತ್ತಿದ್ದಾರೆ.

ಮೇಲಿನ ಅಂಶಗಳ ಪಾಲನೆಯಿಂದ ಪ್ರಸ್ತುತ ಶೇ 30% ರಷ್ಟು ನಾಯಿಗಳು ಕಡಿಮೆಯಾಗಿದ್ದು, ಹಾಲಿ 50 ಬೀದಿ ನಾಯಿಗಳು ಲಾಲ್‌ಬಾಗ್ ಸಸ್ಯತೋಟದಲ್ಲಿರುತ್ತವೆ. ದಿನವಹಿ ಸಸ್ಯತೋಟವನ್ನು ಸಂದರ್ಶಿಸುವ ಸಾವಿರಾರು ನಡಿಗೆದಾರು ತಿಂಡಿ ತಿನಿಸುಗಳನ್ನು ಹಾಕುವುದನ್ನು ನಿಲ್ಲಿಸಿದ್ದಲ್ಲಿ ಬೀದಿ ನಾಯಿಗಳ ಸಂಖ್ಯೆಯು ಸಹಾ ಗಣನೀಯವಾಗಿ ಕಡಿಮೆಯಾಗಲು ಸಾಧ್ಯವಾಗುತ್ತದೆ. ಆದ್ದರಿಂದ ನಡೆಗೆದಾರರು ಇಲಾಖೆಯ ಆಶಯಕ್ಕೆ ತಕ್ಕಂತೆ ಸಹಕರಿಸಬೇಕಾಗಿರುತ್ತದೆ.

-17- Lok/BCD-3419/18.

## III. ಲಾಲ್‌ಬಾಗ್ ಮಣ್ಣಿಗಿಂತ ಹೆಚ್ಚಾಗಿ ಕಾಂಕ್ರೀಟ್ ಮಯವಾಗುತ್ತಿದೆ ಎಂದು ಗಿರಿನಗರದ ನಿವಾಸಿ

### ಅರುಣಾ ರವರ ಹೇಳಿಕೆಗೆ ಸ್ಪಷ್ಟೀಕರಣ

ಲಾಲ್‌ಬಾಗ್ ಸಸ್ಯತೋಟದಲ್ಲಿ ಬ್ರಿಟೀಷ್ ಆಳ್ವಿಕೆಯ ಸಮಯದಲ್ಲಿ ನಿರ್ಮಾಣಗೊಂಡ ಒಂದು ಶತಮಾನಕ್ಕೂ ಹಳೆಯ ಕಟ್ಟಡಗಳಿರುತ್ತವೆ. ಅವುಗಳಲ್ಲಿ ಒಂದಾದ ಡಾ|| ಎಂ.ಹೆಚ್.ಮರಿಗೌಡ ರಾಷ್ಟ್ರೀಯ ಗ್ರಂಥಾಲಯ ಕಟ್ಟಡವು ಶೀಥಲಗೊಂಡು ನೀರು ಸೋರಿಕೆಯಾಗುತ್ತಿದ್ದು, ಇದನ್ನು ಮೂಲ ಸ್ವರೂಪದಲ್ಲಿ ಸಂರಕ್ಷಿಸಲು ಅನುವಾಗುವಂತೆ ಪಾರಂಪರಿಕ ಇಲಾಖೆಯ ಮುಖೇನ ರೂ.98.00 ಲಕ್ಷಗಳ ವೆಚ್ಚದಲ್ಲಿ ದುರಸ್ಥಿ ಮತ್ತು ಸಂರಕ್ಷಣಾ ಕಾರ್ಯವನ್ನು ಕಳೆದ ಒಂದು ವರ್ಷದ ಅವಧಿಯಲ್ಲಿ ಕೈಗೊಂಡು ಪ್ರಸ್ತುತ ಕಟ್ಟಡವನ್ನು ಸುಸ್ಥಿತಿಗೆ ತಂದು ಮೂಲ ಸ್ವರೂಪದಲ್ಲಿಯೇ ಸಂರಕ್ಷಿಸಲಾಗುತ್ತಿದೆ. (ಫೋಟೋ ಪ್ರತಿ ಲಗತ್ತಿಸಿದೆ)

ಚಿಕ್ಕಕೆರೆಯ ಸೇತುವೆ ಬಳಿಯಿಂದ ತರಬೇತಿ ಕೇಂದ್ರಕ್ಕೆ ತೆರಳುವ ಹಳೆಯ ಕರೆಯ ಗೋಡೆ ನೀರಿಗೆ ಕುಸಿದು ಬಿದಿದ್ದು, ಅಪಾಯಕಾರಿ ಹಂತದಲ್ಲಿತ್ತು. ಪ್ರಸ್ತುತ ಈ ಸ್ಥಳದಲ್ಲಿ ವೈಜ್ಞಾನಿಕವಾಗಿ ತಡೆಗೋಡೆಯನ್ನು ನಿರ್ಮಿಸಿದ್ದು, ಪ್ರವಾಸಿಗರು ಮತ್ತು ಮಕ್ಕಳು ಕೆರೆಯ ಸೌಂದರ್ಯ, ಬೃಹತ್ ಜಲಪಾತದ ಸೊಬಗನ್ನು ಸವಿಯಲು, ಕೆರೆಯ ನೀರಿನಲ್ಲಿರುವ ತರೇವಾರಿ ಕಮಲದ ಹೂಗಳು ಹಾಗೂ ಹಕ್ಕಿ ಪಕ್ಷಿಗಳನ್ನು ಸುಗಮವಾಗಿ ವೀಕ್ಷಿಸಲು ಅನುವಾಗುವಂತೆ ಈ ಪ್ರದೇಶದಲ್ಲಿ ವೀಕ್ಷಣಾ ಡೆಕ್ಕನ್ನು ಸಹಾ ನಿರ್ಮಿಸಲಾಗಿರುತ್ತದೆ. (ಛಾಯಾ ಚಿತ್ರ ಲಗತ್ತಿಸಿದೆ)

ಲಾಲ್‌ಬಾಗ್ ಸುತ್ತಲೂ ಕಾಂಪೌಂಡ್ ಇದ್ದು, ಇದು ಕೆಲವೆಡೆ ಶಿಥೀಲಗೊಂಡು ಬೀಳುವ ಹಂತದಲ್ಲಿ ಇದ್ದುದರಿಂದ ಮುನ್ನಚ್ಚರಿಕೆಯಾಗಿ ಹಾಗೂ ಸಸ್ಯತೋಟದ ಸಂರಕ್ಷಣೆಯ ದೃಷ್ಠಿಯಿಂದ ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ಮೆಟ್ರೋ ನಿಲ್ದಾಣದವರೆಗೆ ಹಾಗೂ ಮುಖ್ಯದ್ವಾರದಿಂದ ಜೋಡಿ ರಸ್ತೆ ಕಡೆಗಾದಂತೆ ಶಿಥೀಲಗೊಂಡ ಕಾಂಪೌಂಡ್‌ನ್ನು ತೆರವುಗೊಳಿಸಿ ಭದ್ರವಾದ ಅಡಿಪಾಯ ಹಾಕಿ ಹಿಂದಿಗಿಂತಲೂ ಹೆಚ್ಚು ಎತ್ತರಕ್ಕೆ ಕಾಂಪೌಂಡ್ ಗೋಡೆಯನ್ನು ನಿರ್ಮಿಸಲಾಗಿರುತ್ತದೆ. (ಛಾಯ ಚಿತ್ರ ಲಗತ್ತಿಸಿದೆ)

ಲಾಲ್‌ಬಾಗ್ ಜೋಡಿ ರಸ್ತೆಯ ಬಳಿ ಪ್ರವಾಸಿಗರಿಗೆ ಮೂಲತಃ 5 ಎಕರೆ ಪ್ರದೇಶದಲ್ಲಿ ವಾಹನ ನಿಲ್ದಾಣವಿದ್ದು, 15 ವರ್ಷಗಳ ಹಿಂದೆ ಈ ಪ್ರದೇಶಕ್ಕೆ ಸಪೂರ್ಣವಾಗಿ ಡಾಂಬರ್ ಹಾಕಲಾಗಿತ್ತು, ಹಿಗಾಗಿ ಮಳಿಗೆ ನೀರಿನ ಇಂಗುವಿಕೆ ಸಪೂರ್ಣವಾಗಿ ಸ್ಥಗಿತಗೊಂಡು ಈ ಪ್ರದೇಶದಲ್ಲಿ ಯಾವುದೇ ಗಿಡ ಮರಗಳಿಲ್ಲದೇ

Lok/BCD-3419/18 18

ಬರಡು ಪ್ರದೇಶವಾಗಿದ್ದು, ಜೊತೆಗೆ ವೈಜ್ಞಾನಿಕವಾಗಿ ನಿಲ್ದಾಣವಿಲ್ಲದೇ ಲಾಲ್‌ಬಾಗ್‌ಗೆ ಬರುವ ಪ್ರವಾಸಿಗರಿಗೆ ಈ ಪದ್ರೇಶದಲ್ಲಿ ಅವಶ್ಯ ಮೂಲ ಸೌಕರ್ಯಗಳ ಕೊರತೆಯಿತ್ತು.

ಪ್ರಸ್ತುತ ಬಾಷ್ ಕಂಪನಿಯು ಖಾಸಗಿ ಸಹಭಾಗಿತ್ವದಡಿ (CSR) ಹಿಂದಿನ ವಾಹನ ನಿಲ್ದಾಣವನ್ನು ಸಂಪೂರ್ಣವಾಗಿ ಪರಿಸರ ಪೂರಕ ಹಾಗೂ ಪರಿಸರ ಸ್ನೇಹಿ ಮಾದರಿ ವಾಹನ ನಿಲ್ದಾಣವನ್ನಾಗಿ ರೂ.5.5 ಕೋಟಿ ವೆಚ್ಚದಲ್ಲಿ ಪರಿವರ್ತಿಸಿದ್ದಾರೆ. ಪರಿಸರ ಸ್ನೇಹಿ ವಾಹನ ನಿಲ್ದಾಣದ ಅಂಶಗಳು ಇಂತಿವೆ.

1. ಶೇ.100 ರಷ್ಟು ಮಳೆ ನೀರು ಇಂಗದ ಮೊದಲ ಸ್ಥಿತಿಯನ್ನು ಪರಿವರ್ತಿಸಿ ಶೇ.60 ರಷ್ಟು ಭಾಗಕ್ಕೆ ಮರಳಿನ ಮೇಲೆ ಕಾಬಲ್ ಸ್ಟೋನ್ ಅಳವಡಿಸಿ ಮಳೆ ನೀರು ಇಂಗುವಂತೆ ಮಾಡಲಾಗಿದೆ. ವಾಹನ ಸಂಚಾರದ ರಸ್ತೆಗಳಿಗೆ ಮಾತ್ರ ಡಾಂಬರ್ ಹಾಕಲಾಗಿದೆ.

2. ಮರಗಿಡಗಳು ಇಲ್ಲದ ಮೊದಲ ಸ್ಥಿತಿಯನ್ನು ಬದಲಿಸಿ 6 ರಿಂದ 7 ಪ್ರದೇಶಗಳಲ್ಲಿ ಮರಗಿಡಗಳನ್ನು ನೆಡಲು ವಿಸ್ತಾರವಾದ ಮೀಡಿಯನ್ ಪ್ಲಾಂಟರ್ ಸ್ಥಳವನ್ನು ಬಿಡಲಾಗಿದೆ. ಈ ಪ್ರದೇಶದಲ್ಲಿ ಅಂಡಮಾನ್ ಪ್ಯಾಪಿಟ್ಟ ಟರ್ಮಿನೇಲಿಯಾ, ಮೆಂಟಾಲಿ, ಕ್ರೆಸೆನ್ಸಿಯಾ, ಕುಜಿಟೆ (ಸನ್ಯಾಸಿ ಬಕರೆ) ಗೋಲ್ಡನ್ ಸೈಪ್ರೆಸ್, ಪರಿಮಳ ಬೀರುವ ದೇವಗಣಗಲೆ, ಆಕರ್ಷಕ ಡ್ವಾರ್ಫ್ ಪೆಂಡಾನಸ್ ವಿವಿಧ ವರ್ಣದ ಲಿಲ್ಲಿಗಳು, ಆಕರ್ಷಕ ಹುಲ್ಲುಹಾಸಿನ ಭೂದೃಶ್ಯ ಸೇರಿದಂತೆ 2000ಕ್ಕೂ ಹೆಚ್ಚು ಗಿಡಮರಗಳನ್ನು ಈ ಪ್ರದೇಶದಲ್ಲಿ ನೆಡಲಾಗಿದ್ದು, ಈ ಪದ್ರೇಶಕ್ಕೆ ಹೊಸ ಮರಗಳನ್ನು ನೆಡುವುದರ ಜೊತೆಗೆ ನಿಲುಗಡೆಗೊಳ್ಳುವ ವಾಹನಗಳಿಗೆ ನೆರಳಿನ ಆಶ್ರಯ ನಿಡುತ್ತಿದ್ದು, ಎಲ್ಲಕ್ಕಿಂತ ಹೆಚ್ಚಾಗಿ ಲಾಲ್‌ಬಾಗ್ ಸಸ್ಯತೋಟಕ್ಕೆ ಹೆಚ್ಚಿನ ಸಸ್ಯಪ್ರಭೇದಗಳನ್ನು ಪರಿಚಯಿಸಿದಂತಾಗಿದೆ.

3. ದ್ವಿಚಕ್ರ ಹಾಗೂ ನಾಲ್ಕು ಚಕ್ರ ವಾಹನಗಳಿಗಾಗಿ ಸುಸಜ್ಜಿತವಾದ ವಾಹನ ನಿಲ್ದಾಣ ರೂಪಗೊಂಡಿದೆ.

4. ವಾಹನ ನಿಲ್ದಾಣದ ಪೂರ್ಣ ಪ್ರದೇಶಕ್ಕೆ ವಿದ್ಯುತ್ ಬದಲಾಗಿ ಪರಿಸರ ಪೂರಕ ಸೌರಶಕ್ತಿಯನ್ನು ಉಪಯೋಗಿಸಲಾಗುತ್ತಿದೆ.

5. ವಾಹನ ನಿಲ್ದಾಣ ಪ್ರದೇಶದಲ್ಲಿ ಪ್ರವಾಸಿಗರ ಉಪಯೋಗಕ್ಕಾಗಿ ಒಂದು ಪ್ರತ್ಯೇಕ ಶೌಚಾಲಯ, 50 ಡಸ್ಟ್ ಬಿನ್‌ಗಳು ಹಾಗೂ ಕೂರುವ ಬೆಂಚುಗಳನ್ನು ಅಳವಡಿಸಲಾಗಿದ್ದು, ಸದಾ ನೈರ್ಮಲ್ಯತೆಯಿಂದ

ಕೊಡಿರುವಂತೆ ಸ್ವಚ್ಛತಾ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲಾಗುತ್ತಿದೆ.

6. ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲು ಉದ್ದೇಶಿಸಿದ್ದು, ಪ್ರಸ್ತುತ ಪಾಯೋಗಿಕ ಹಂತದಲ್ಲಿರುತ್ತದೆ.

ಒಟ್ಟಾರೆ ಅತ್ಯಂತ ಸುವ್ಯವಸ್ಥಿತವಾಗಿ ರೂಪಗೊಂಡಿರುವ ಪರಿಸರ ಸ್ನೇಹಿ ವಾಹನ ನಿಲ್ದಾಣ ಲಾಲ್‌ಬಾಗ್‌ಗೆ ಬೇಟಿ ನೀಡುವ ನಡಿಗೆದಾರರು ಮತ್ತು ಪ್ರವಾಸಿಗರ ಪ್ರಶಂಸೆಗೆ ಪಾತ್ರವಾಗಿರುತ್ತದೆ. ಲಾಲ್‌ಬಾಗ್‌ಗೆ ಪೂರಕರವಾದಂತಹ ಹಾಗೂ ಲಾಲ್‌ಬಾಗ್‌ನ ಅವಶ್ಯ ಹಳೆಯ ಕಟ್ಟಡಗಳನ್ನು ಮೂಲ ಸ್ವರೂಪದಲ್ಲಿಯೇ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸುವ ಸದುದ್ದೇಶದಿಂದ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆಯೇ ಹೊರತು ಶ್ರೀ ಅರುಣ್ ರವರು ಹೇಳಿರುವಂತೆ ಲಾಲ್‌ಬಾಗ್ ನ್ನು ಕಾಂಕ್ರೀಟ್‌ಮಯ ಮಾಡುವ ಯಾವುದೇ ಉದ್ದೇಶ ತೋಟಗಾರಿಕೆ ಇಲಾಖೆಯದ್ದಾಗಿರುವುದಿಲ್ಲವೆಂದು ಸ್ಪಷ್ಟೀಕರಿಸಿದೆ.

ಮೇಲ್ಕಂಡ ವಿಶೇಷ ಕಾರ್ಯಗಳ ಜೊತೆಗೆ ಲಾಲ್‌ಬಾಗ್ ಸಸ್ಯತೋಟದಲ್ಲಿ ಮೂಲತಃ 1853 ಸಸ್ಯ ಪ್ರಭೇದಗಳಿದ್ದು ಈ ಸಂಖ್ಯೆ ಇಂದಿಗೆ 2553 ರನ್ನು ದಾಟಿದೆ. ಹೀಗಾಗಿ ದೇಶ ವಿದೇಶದ 700 ಅಪರೂಪದ ಸಸ್ಯ ಪ್ರಭೇದಗಳನ್ನು ಕಾಲಕಾಲಕ್ಕೆ ವೈಜ್ಞಾನಿಕವಾಗಿ ನೆಟ್ಟು ಬೆಳಸಲಾಗುತ್ತಿದೆ. ಇವುಗಳ ಜೊತೆಗೆ ಪ್ರಸ್ತುತ ಹೊಸದಾಗಿ ನೀರು ಹಾಗೂ ಜೌಗು ಪ್ರದೇಶದಲ್ಲಿ ಬೆಳೆಯಬಲ್ಲ 250 ಕ್ಕೂ ಹೆಚ್ಚು ಸಸ್ಯ ಸಂಗ್ರಹವಿರುವ ಸಂಕನ್ ಗಾರ್ಡನ್‌ನ್ನು ಅಭೀವೃದ್ಧಿಪಡಿಸಲಾಗುತ್ತಿದೆ.

ಜೊತೆಗೆ ಓಪನ್‌ವರ್ ಬಟರ್‌ಪ್ಲೈ ಪಾರ್ಕ್, ಪ್ರ್ಯಾಗ್ರೆನ್ಸ್ ಪಾರ್ಕ್, ವಿನಾಶದ ಅಂಚಿನಲ್ಲಿರುವ ಮರ–ಗಿಡಗಳ ಸಂರಕ್ಷಣಾ ತಾಕು, ಪಶ್ಚಿಮ ಘಟ್ಟದಲ್ಲಿನ ಅಪರೂಪದ ಸಸ್ಯ ಸಂಗ್ರಹ ಲಾಲ್‌ಬಾಗ್ ಕೆರೆಗೆ ಏರೇಟರ್‌ಗಳ ಅಳವಡಿಕೆ ಹೀಗೆ ಹತ್ತು–ಹಲವು ಸಸ್ಯಶಾಸ್ತ್ರೀಯ ತೋಟಕ್ಕೆ ಪೂರಕರವಾದತಂಹ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಹಾಗಾಗಿ ಲಾಲ್‌ಬಾಗ್‌ನ್ನು ಸಸ್ಯಶಾಸ್ತ್ರಿಯ ತೋಟವನ್ನಾಗಿ ಉಳಿಸಿ, ಬೆಳೆಸಿ ಸಂರಕ್ಷಿಸುವುದು ತೋಟಗಾರಿಕೆ ಇಲಾಖೆಯ ಜವಾಬ್ದಾರಿಯಾಗಿದ್ದು, ಅದನ್ನು ಸಮರ್ಥವಾಗಿ ಸಾಕಾರಗೊಳಿಸಲಾಗುತ್ತಿದೆ.

## IV ಕಾಣೆಯಾದ ಮ್ಯೂಸಿಯಂ ಎಂಬ ಅಂಶಕ್ಕೆ ವಿವರಣೆ:–

ಲಾಲ್‌ಬಾಗ್‌ನಲ್ಲಿ ಬ್ರಿಟಿಷ್ ಆಳ್ವಿಕೆಯ ಸಮಯದಲ್ಲಿ ಪ್ರಸ್ತುತ ಲೆಕ್ಕಶಾಖೆ ಇರುವ ಕಟ್ಟಡದಲ್ಲಿ ಸಣ್ಣ ಪ್ರಮಾಣದ ಮ್ಯೂಸಿಯಂ ಇತ್ತೆಂದು ಹಾಗೂ ಅಲ್ಪ ಅವಧಿಯಲ್ಲಿಯೇ ಅದನ್ನು ಸ್ಥಗಿತಗೊಳಿಸಲಾಗಿದೆ ಎಂದು ಕೇಳಿರುತ್ತೇವೆ. ಆದರೆ ಲಾಲ್‌ಬಾಗ್‌ನಲ್ಲಿ

LOK/BCD-3419/18 -20-

ಯಾವುದೇ ಶಾಶ್ವತವಾದ ಮ್ಯೂಸಿಯಂ ಇರುವುದಿಲ್ಲ. ಇದನ್ನು ಮನಗಂಡು ಹೊಸದಾಗಿ ಮ್ಯೂಸಿಯಂನ್ನು ತೆರೆಯುವುದು ಇಲಾಖೆಯ ಆಶಯವಾಗಿದ್ದು, ಕಟ್ಟಡದ ಕೊರತೆಯಿಂದ ಸದ್ಯಕ್ಕೆ ಇದು ಸಾಧ್ಯವಾಗಿರುವುದಿಲ್ಲ. ಆದರೆ ಕೃಂಬಿಗಲ್ ಹಾಲ್‌ನ್ನು ವರ್ಚಿಯಲ್ ಮ್ಯೂಸಿಯಂ ಯನ್ನಾಗಿ ಸಂರಕ್ಷಿಸಲು ಈಗಾಗಲೇ ರಾಜ್ಯ ಪುರಾತತ್ವ ಇಲಾಖೆಗೆ ರೂ.98.00 ಲಕ್ಷಗಳನ್ನು ಠೇವಣಿ ಇಡಲಾಗಿದ್ದು, ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಮಂಡಿಸಿದೆ.

ಮೇಲ್ಕಂಡ ವಾಸ್ತವಾಂಶಗಳನ್ನು ತಮ್ಮಗಳ ಅವಗಾಹನೆಗೆ ತರುತ್ತಾ, ದಿನಾಂಕ:- 25-11-2018 ರಂದು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕಾ ಸಮೂಹವು ಏರ್ಪಡಿಸಿದ್ದ ಜನ ಸ್ಪಂದನಾ ಕಾರ್ಯಕ್ರಮದಲ್ಲಿ ನೆರದಂತಹ ನೂರಾರು ವಾಯು ವಿಹಾರಿಗಳು/ನಡಿಗೆದಾರರ ಸಮ್ಮುಖದಲ್ಲಿಯೂ ಸಹಾ ತೋಟಗಾರಿಕೆ ಜಂಟಿ ನಿರ್ದೇಶಕರು (ಉದ್ಯಾನವನಗಳು, ತೋಟಗಳು ಮತ್ತು ಪುಷ್ಪಾಭಿವೃದ್ಧಿ) ಹಾಗೂ ತೋಟಗಾರಿಕೆ ಉಪ ನಿರ್ದೇಶಕರು, ಲಾಲ್‌ಬಾಗ್ ಸಸ್ಯತೋಟ ರವರುಗಳು ಮೇಲಿನ ಎಲ್ಲಾ ಅಂಶಗಳ ಬಗ್ಗೆ ಹಾಗೂ ಇನ್ನೂ ಕೆಲವು ಅವಶ್ಯಕ ನಿರ್ವಹಣಾ ಕಾರ್ಯಗಳ ಬಗ್ಗೆ ಸವಿವರವಾಗಿ ಚರ್ಚಿಸಿ ಅವರ ಸಲಹೆಗಳನ್ನು ಪಡೆಯಲಾಗಿದೆ. ಕೈಗೊಂಡಿರುವ ಕಾರ್ಯ ಮತ್ತು ಕ್ರಮಗಳ ಬಗ್ಗೆ ಬಹುತೇಕರು ಪ್ರಶಂಸೆಯನ್ನು ಸಹಾ ವ್ಯಕ್ತಪಡಿಸಿದ್ದಾರೆ.

ಲಾಲ್‌ಬಾಗ್ ಸಸ್ಯತೋಟವು ರಾಜ್ಯದ ಹೆಗ್ಗಳಿಕೆಯ ಮೊದಲ ಸಸ್ಯಶಾಸ್ತ್ರೀಯ ತೋಟವಾಗಿದ್ದು, ಭೇಟಿ ನೀಡುವ ಲಕ್ಷಾಂತರ ಪ್ರವಾಸಿಗರು, ಜನ ಸಾಮಾನ್ಯರು, ವಾಯು ವಿಹಾರಿಗಳಿಗೆ ಎಲ್ಲಾ ಅವಶ್ಯ ಮೂಲ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಸಮರ್ಪಕ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುವುದು ನಮ್ಮ ಆಧ್ಯ ಕರ್ತವ್ಯವಾಗಿದ್ದು, ಅದನ್ನು ಸಮರ್ಪಕವಾಗಿ ಕೈಗೊಳ್ಳಲಾಗುತ್ತಿದೆ.

ಇಲಾಖೆಯ ಉಸ್ತುವಾರಿ ಮತ್ತು ನಿರ್ವಹಣೆ ಜೊತೆಗೆ ಲಾಲ್‌ಬಾಗ್‌ನ್ನು ಒಂದು ಅಮೂಲ್ಯ ಸಸ್ಯಶಾಸ್ತ್ರೀಯ ತೋಟವನ್ನಾಗಿ ಉಳಿಸಿ, ಬೆಳೆಸಿ ಸಂರಕ್ಷಿಸಲು ಪ್ರವಾಸಿಗರು ಮತ್ತು ವಾಯು ವಿಹಾರಿಗಳ ಬದ್ಧತೆಯು ಸಹಾ ಅಷ್ಟೇ ಮುಖ್ಯವಾಗಿರುತ್ತದೆ. ಅಭಿವೃದ್ಧಿ ಹೊಂದಿದ್ದ ದೇಶಗಳಲ್ಲಿರುವ ಜನ ಸಾಮಾನ್ಯರ ಬದ್ಧತೆಯನ್ನು ಸಸ್ಯತೋಟದ ಸಂರಕ್ಷಣೆಗಾಗಿ ಇವರುಗಳು ಸಹಾ ರೂಢೀಸಿಕೊಳ್ಳಬೇಕಾಗಿರುತ್ತದೆ ಹೀಗಾದಾಗ ಮಾತ್ರ ಪ್ರವಾಸಿಗರು ಮತ್ತು ವಾಯು ವಿಹಾರಿಗಳ ಜೊತೆ ಸೇರಿ ನೂರಾಕ್ಕೆ ನೂರರಷ್ಟು ಸಸ್ಯತೋಟದ ಪಾವಿತ್ರತೆಯನ್ನು ಕಾಪಾಡಲು ಸಾಧ್ಯವಾಗುತ್ತದೆ. ಎಂಬ ಅಂಶವನ್ನು ತಮ್ಮಗಳ ಅವಗಾಹನೆಗೆ ತರುತ್ತಾ, ನಮ್ಮ ವ್ಯಾಪ್ತಿಯಲ್ಲಿ ಲಾಲ್‌ಬಾಗ್ ಸಸ್ಯತೋಟದ ಸರ್ವತಾ, ನಿರ್ವಹಣೆ ಹಾಗೂ ಸಂರಕ್ಷಣೆ ಕಾರ್ಯಗಳನ್ನು ಕಾಲ ಕಾಲಕ್ಕೆ ಜವಾಬ್ದಾರಿಯುತವಾಗಿ ಕೈಗೊಳ್ಳಲಾಗುವುದೆಂಬ ಅಂಶವನ್ನು ತಮ್ಮಗಳ ಆಧ್ಯ ಅವಗಾಹನೆಗೆ ಗೌರವಪೂರ್ವಕವಾಗಿ ತರಬಯಸುತ್ತೇನೆ."

2) It is submitted by Dr.M.Jagadeesh, Joint Director of Horticulture and Sri M.R.Chandrashekar, Deputy Director, Lalbagh, Bengaluru, that steps are being taken to remove and clear the garbage in the Lalbagh and to see that no garbage is thrown in the Lalbagh area. Since the details of the same have been set out in the report extracted above, I find it is not necessary to elaborate the submission made by them.

3) Though notice was issued to Respondents No.1 Commissioner and Respondent No.2 Joint Commissioner of BBMP, Bengaluru and Respondent No.6 Joint Director, Department of Animal Husbandry, Bengaluru, they are neither present nor any representation is made on their behalf. However, a Status Report dated 22.12.18 has been filed on behalf of the third respondent i.e., Special Commissioner, Health & Administration, BBMP, Bengaluru. It is useful to extract the said report which reads as here under –

> "ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ನೋಟೀಸ್ ಮತ್ತು ಮಾನ್ಯ ಲೋಕಾಯುಕ್ತರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುಪಾಲನಾ ವಿಭಾಗಕ್ಕೆ ಅನ್ವಯವಾಗುವ ಅಂಶಗಳಿಗೆ ಸಂಬಂಧಿಸಿದ ಸ್ಪಷ್ಟನೆಯನ್ನು ಈ ಕೆಳಕಂಡಂತೆ ನಿವೇದಿಸಲಾಗಿದೆ.
>
> ಮಾನ್ಯ ಲೋಕಾಯುಕ್ತರ ಉಲ್ಲೇಖಿತ ಆದೇಶದ ಐದನೇ ಪ್ಯಾರಾದಲ್ಲಿ ಲಾಲ್‌ಬಾಗ್‌ನ ಪ್ರವಾಸಿಗರನ್ನು ಬೀದಿ ನಾಯಿಗಳ ಹಾವಳಿಯಿಂದ ಪಾರು

Lok/BCD-3419/18 -22-

ಮಾಡಲು ಪಾಲಿಕೆಯು ಕರ್ನಾಟಕ ಮುನ್ಸಿಪಲ್ ಕಾಯ್ದೆಯ 345ನೇ ಸೆಕ್ಷನ್‌ನ್ನು ಬಳಸಿಕೊಳ್ಳಬೇಕೆಂದು ಆದೇಶಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರದಲ್ಲಿ ಬೀದಿ ನಾಯಿಗಳ ಸಂತತಿಯನ್ನು / ಸಂಖ್ಯಾ ಸ್ಫೋಟವನ್ನು ಕ್ರಮೇಣ ನಿಯಂತ್ರಿಸುವುದು ಮತ್ತು ಸಾರ್ವಜನಿಕರಿಗೆ ನಾಯಿಗಳಿಂದ ಬರಬಹುದಾದ ಹುಚ್ಚುನಾಯಿ ರೋಗವನ್ನು ತಡೆಯುವುದು ಈ ಸಂತಾನಹರಣ ಶಸ್ತ್ರಚಿಕಿತ್ಸೆ (Animal Birth Control) ಮತ್ತು ಹುಚ್ಚುನಾಯಿ ರೋಗದ ವಿರುದ್ಧ ಲಸಿಕಾ (Anti Rabies Vaccination) ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

ಬಿ.ಬಿ.ಎಂ.ಪಿಯ ಪಶುಪಾಲನಾ ವಿಭಾಗವು ಪಾಲಿಕೆಯ ಎಲ್ಲಾ 8 ವಲಯಗಳ (198 ವಾರ್ಡ್‌ಗಳು) ವ್ಯಾಪ್ತಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಮುಖಾಂತರ Animal Birth Control Dog Rules-2001ರ ಅನ್ವಯ ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಹಾಗೂ ಹುಚ್ಚುನಾಯಿ ರೋಗದ (Anti Rabies Vaccination) ವಿರುದ್ಧ ಲಸಿಕೆ ಹಾಕುವ ಕಾರ್ಯಕ್ರಮವನ್ನು ನಿರ್ವಹಿಸಲಾಗುತ್ತಿರುತ್ತದೆ.

ಮಾನ್ಯ ಲೋಕಾಯುಕ್ತರ ಉಲ್ಲೇಖಿತ ಆದೇಶದಲ್ಲಿ ಪ್ರಸ್ತಾಪಿಸಲಾಗಿರುವ ಲಾಲ್‌ಬಾಗ್ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯಕ್ಕೆ ಸೇರಿರುತ್ತದೆ. ದಕ್ಷಿಣ ವಲಯದಲ್ಲಿ 44 ವಾರ್ಡ್‌ಗಳಿದ್ದು ಬಹುತೇಕ ಎಲ್ಲಾ ವಾರ್ಡ್‌ಗಳಿಂದ ಬೀದಿ ನಾಯಿಗಳ ಬಗ್ಗೆ ಪ್ರತಿನಿತ್ಯ ದೂರುಗಳು ಬರುವುದರಿಂದ ಎಲ್ಲಾ ದೂರುಗಳನ್ನು ಆದ್ಯತೆಯ ಮೇಲೆ ಸ್ಪಂದಿಸಲಾಗುತ್ತಿದೆ.

ಲಾಲ್‌ಬಾಗ್‌ನಲ್ಲಿ ದಿನಾಂಕ.27.02.2018 ರಂದು 13 ನಾಯಿಗಳು ಹಾಗೂ 11.07.2018 ರಂದು 6 ನಾಯಿಗಳು ಒಟ್ಟು 19 ನಾಯಿಗಳನ್ನು ಹಿಡಿದು ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಿ, ಹುಚ್ಚುನಾಯಿ ರೋಗದ ವಿರುದ್ಧ ಲಸಿಕೆ ಹಾಕಿ, ಹಿಡಿದ ಸ್ಥಳದಲ್ಲಿಯೇ ಅಂದರೆ ಲಾಲ್‌ಬಾಗ್‌ನಲ್ಲೇ ಬಿಡಲಾಗಿದೆ. ಅಲ್ಲದೆ ಜುಲೈ 2018ರ ದಿನಾಂಕ. 24, 26 ಮತ್ತು 30 ಹಾಗೂ ಆಗಸ್ಟ್ 2018ರ 4, 7 ಮತ್ತು 15ನೇ ದಿನಾಂಕಗಳಂದು ಲಾಲ್‌ಬಾಗ್ ಹಾಗೂ ಸುತ್ತಮುತ್ತಲಿನ ಪ್ರದೇಶದ 137 ಬೀದಿ ನಾಯಿಗಳಿಗೆ ಹುಚ್ಚುನಾಯಿ ರೋಗದ ವಿರುದ್ಧ ಲಸಿಕೆ ಹಾಕಲಾಗಿರುತ್ತದೆ. (ಪ್ರತಿಗಳನ್ನು ಲಗತ್ತಿಸಿದೆ).

ಲಾಲ್‌ಬಾಗ್‌ನ ತೋಟಗಾರಿಕಾ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಿ ಸಂತಾನಹರಣ ಶಸ್ತ್ರಚಿಕಿತ್ಸೆಗೊಳಪಡದ ನಾಯಿಗಳನ್ನು ಹಿಡಿದು ಸಂತಾನಹರಣ ಶಸ್ತ್ರಚಿಕಿತ್ಸೆಗೊಳಪಡಿಸಿ, ಹುಚ್ಚುನಾಯಿ ರೋಗದ ವಿರುದ್ಧ ಲಸಿಕೆ ಹಾಕುವ ಕಾರ್ಯಕ್ರಮವನ್ನು ನಿರಂತರವಾಗಿ ಮುಂದುವರೆಸಲಾಗುವುದೆಂದು ಈ ಮೂಲಕ ತಮ್ಮಲ್ಲಿ ನಿವೇದಿಸಿದೆ.

ಲಾಲ್‌ಬಾಗ್‌ನಲ್ಲಿ ಪ್ರಾಣಿಪ್ರಿಯರು ಬೀದಿ ನಾಯಿಗಳಿಗೆ ಆಹಾರ ನೀಡುತ್ತಿರುವುದರಿಂದ ಮತ್ತು ಪ್ರವಾಸಿಗರು ತಿಂದು ಉಳಿದ ತಿಂಡಿ-ತಿನಿಸುಗಳನ್ನು ಶಿಸ್ತುರಹಿತರಾಗಿ ಎಲ್ಲೆಂದರಲ್ಲಿ ಬಿಸಾಡುವುದರಿಂದ ಲಾಲ್‌ಬಾಗ್‌ನ ಸುತ್ತಮುತ್ತಲ

-23- LOK/BCD-3419/18

ಪ್ರದೇಶದ ಬೀದಿ ನಾಯಿಗಳು ಲಾಲ್‌ಬಾಗ್‌ನೊಳಗೆ ಆಹಾರವನ್ನು ಹುಡುಕಿಕೊಂಡು ನುಸುಳುವುದರಿಂದ ನಾಯಿಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಈ ಬಗ್ಗೆ ತೋಟಗಾರಿಕಾ ಇಲಾಖೆಯವರು ಹೆಚ್ಚಿನ ಮುಂಜಾಗ್ರತೆಯನ್ನು ವಹಿಸಿದಲ್ಲಿ ಇಂತಹ ಅನಾಹುತಗಳನ್ನು ತಪ್ಪಿಸಬಹುದಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ಇತ್ತೀಚಿನ ಈ ಕೆಳಗಿನ ಹಲವಾರು ಆದೇಶಗಳ ಮುಖಾಂತರ ನಾಯಿಗಳನ್ನು ಹಿಡಿದು ಕೂಡಿ ಹಾಕುವುದನ್ನು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಸ್ಥಳಾಂತರ ಮಾಡುವುದನ್ನು ಮತ್ತು ದಯಾ ಮರಣಕ್ಕೊಳಪಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.

(1) ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ:ಎಸ್‌ಎಲ್‌ಪಿ/ನಂ.691/2009, ದಿನಾಂಕ:23.01.2009.

(2) ಆದೇಶ ಸಂಖ್ಯೆ:ಎಸ್‌ಎಲ್‌ಪಿ/ನಂ.4453/2013, ದಿನಾಂಕ:06.02.2013.

(3) ಆದೇಶ ಸಂಖ್ಯೆ:ಎಸ್‌ಎಲ್‌ಪಿ/ನಂ.17112/2013, ದಿನಾಂಕ:10.05.2013 (ಪ್ರತಿಗಳನ್ನು ಲಗತ್ತಿಸಿದೆ).

ಕರ್ನಾಟಕದ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:41205/2018 ರಂತೆ ಬೀದಿ ನಾಯಿಗಳ ನಿಯಂತ್ರಣ ಕುರಿತು ಪ್ರಕರಣವು (691/2009) ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಿರಾಕರಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರಬಯಸುತ್ತಾ ಸರ್ವೋಚ್ಚ ನ್ಯಾಯಾಲಯದ ಸ್ಪಷ್ಟ ಆದೇಶ ಬರುವವರೆಗೆ ಮೇಲೆ ತಿಳಿಸಲಾದ ಸಂತಾನಹರಣ ಶಸ್ತ್ರಚಿಕಿತ್ಸೆಗೊಳಪಡದ ನಾಯಿಗಳನ್ನು ಹಿಡಿದು ಸಂತಾನಹರಣ ಶಸ್ತ್ರಚಿಕಿತ್ಸೆಗೊಳಪಡಿಸಿ, ಹುಚ್ಚುನಾಯಿ ರೋಗದ ವಿರುದ್ಧ ಲಸಿಕೆ ಹಾಕುವ ಕ್ರಮವನ್ನು ಹೊರತುಪಡಿಸಿ ಮುನ್ಸಿಪಲ್ ಕಾಯ್ದೆಗಳ ಅನುಗುಣವಾಗಿ ಕ್ರಮವಹಿಸಲು ಸಾಧ್ಯವಿರುವುದಿಲ್ಲ ಎಂಬ ಮಾಹಿತಿಯನ್ನು ತಮ್ಮಲ್ಲಿ ಸಲ್ಲಿಸಿದೆ."

4) Along with the report certain annexures have been produced. In the absence of the clarification by the Special Commissioner, Health & Administration, BBMP, Bengaluru, who has filed the report, I am unable to understand the annexures produced along with the report. Though the Respondents present today on behalf of R-4 & R-5 submitted that effective steps are being taken to control the problems that

Lok/BCD-3419/18 -24-

is being faced by the members of the public, on account of stray dogs, I am of the view, it is desirable to hear the sixth respondent, who is the Joint Director, Department of Animal Husbandry, Bengaluru, who is endowed with the responsibility of controlling the menace of stray dogs. It is needless to point out that while the stray dogs are required to be protected in the light of the order passed by the Hon'ble Supreme Court of India, the officers of the BBMP are required to protect the members of the public from the stray dogs. Therefore, a place is required to be identified for protecting the life of the stray dogs and also to prevent any untoward incident to the members of the public, more particularly the children. This is a matter which is required to be seriously considered by the sixth respondent and his sub-ordinates. The Interim Order passed by the Hon'ble Supreme Court, prima facie indicates that no stray dogs should be picked-up and dis-located from one place to another. The said order does not prohibit providing a place for rearing and protecting the stray dogs, if the stray dogs are likely to harm the members of the public, more particularly the children. These are the matters on which serious thought is

-25- LOK/BCD - 3419/18.

required to be given by the concerned. As noticed by me earlier, neither the sixth respondent nor other respondents are present here to assist me. Shifting of the stray dogs from one place and placing it in a strange place, may result in conflict between the existing dogs and the fresh ones. However, it should be possible for the BBMP to find out a large extent of land to keep these stray dogs which have become unmanageable and uncontrollable and would seriously affect the life and liberty of the members of the public and more particularly children.

5) I am sure, the concerned authorities of the BBMP would apply their mind on this issue and come forward with a project report, with regard to the steps taken, keeping in mind the observation made by the Hon'ble Supreme Court of India and by-laws framed by the BBMP and the serious threat to life faced by the members of the public, more particularly children. It is needless to point out that if any untoward incident takes place to the members of the public on account of the attack by the stray dogs, the BBMP will be directly accountable for such untoward incidents.

Lok/BCD- 3419/18.        - 26 -

6) In the light of what is stated above, the respondents are given eight weeks time to file the further statement with regard to the steps already taken and to be taken for the purpose of controlling the menace of stray dogs in Bengaluru City, while protecting the rights of the stray dogs.

Communicate this order to the parties concerned. List this case on **6th of March, 2019 at 3.00 p.m.**

P. Vishwanatha Shetty 27/12/2018

**(Justice P.Vishwanatha Shetty)**
Lokayukta
State of Karnataka

*vl

7) Additional Registrar of Enq.1

12) 06/03/2019.        ARE-1.

ನ್ಯಾ. ಲೋಕಾಯುಕ್ತ-ರವರ ಆದೇಶದಂತೆ ವಿಚಾರಣಾಗೆ ನೋಟಿಸ್ ಜಾರಿ ಮಾಡಿದ್ದು, ಪ್ರಕೃತಿ ಮುಂದೂಡಿದೆ.

# KARNATAKA LOKAYUKTA : BENGALURU

